# ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

**ಸಿ. ಸಿ. ನಂಃ1003/2010**

ಪಿಡಬ್ಲ್ಯುಃ 4
ಸಿಡಬ್ಲ್ಯುಃ 1

| | |
|---|---|
| ಸಾಕ್ಷಿಯ ಹೆಸರು | ಃ ಪಿ ಪಿ ಸಂತೋಷ್ |
| ತಂದೆಯ ಹೆಸರು | ಃ ಪಿ ಸಿ ಪೊನ್ನಪ್ಪ |
| ವಯಸ್ಸು | ಃ 45 ವರ್ಷ |
| ವೃತ್ತಿ | ಃ ಸಿ ಪಿ ಐ, ಕೆ ಆರ್ ನಗರ ಪೋ.ಠಾಣೆ |
| ವಾಸಸ್ಥಳ | ಃ ಕೆ ಆರ್ ನಗರ. |

**ದಿನಾಂಕಃ 30-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

1. ನಾನು ಜೂನ್ 2009 ರಿಂದ ಅಕ್ಟೋಬರ್ 2010 ರವರೆಗೆ ವಿರಾಜಪೇಟೆ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ27-10-2009 ರಂದು ವಿರಾಜಪೇಟೆ ಗ್ರಾಮಾಂತರ ಠಾಣೆಯ ದೂರು ಪೆಟ್ಟಿಗೆಯಲ್ಲಿ ಒಂದು ಅನಾಮಧೇಯ ಅರ್ಜಿ ಸಿಕ್ಕಿದ್ದು, ಅದರಲ್ಲಿ ಕೆದಮುಳ್ಳೂರು ಗ್ರಾಮದ ಇಮ್ಮಿ ಸೀನಪ್ಪ ರವರ ಮಗ ಪೂವಪ್ಪ ಎಂಬುವವರು ನಕಲಿ ಸಿ ಆರ್ ಸಿ ಮತ್ತು ಪಂಚಾಯಿತಿ ದಾಖಲಾತಿಗಳನ್ನು ಅಸಲಿಯಂತೆ ಮಾಡಿ ಅದನ್ನು ಬೇರೆಯವರಿಗೆ ನೀಡಿ, ಅಕ್ರಮವಾಗಿ ಹಣವನ್ನು ಸಂಪಾದನೆ ಮಾಡುತ್ತಿದ್ದಾರೆ ಅವರ ಮನೆಗೆ ಹೋಗಿ ನೋಡಿದರೆ ಅಕ್ರಮವಾದ ದಾಖಲಾತಿಗಳು ಮತ್ತು ಸೀಲು ಹಾಗೂ ಮುಂತಾದ ಸಾಮಾನುಗಳು ಸಿಗುತ್ತದೆ ಎಂದು ಸಾರಾಂಶ ಬರೆದಿರುತ್ತದೆ. ಸದರಿ ಅರ್ಜಿಯನ್ನು ನಾನು ಠಾಣಾ ಸಿ.ಮಿಸ್ ಸಂಃ 193/2009 ರಂತೆ ದಾಖಲು ಮಾಡಿಕೊಂಡು, ಅದೇ ದಿನ ರಾತ್ರಿ ನಾನು ನ್ಯಾಯಾಲಯದಿಂದ ಆರೋಪಿಯ ಮನೆಯನ್ನು ಶೋಧನೆ ಮಾಡಲು ಶೋಧನಾ ಸಮುಚ್ಚಿತವನ್ನು ಪಡೆದುಕೊಂಡು, ಠಾಣಾ ಸಿಬ್ಬಂದಿಗಳಾದ ಚಾಸಾಃ19, 20 ಮತ್ತು 21 ಹಾಗೂ ಚಾಸಾಃ2 ಮತ್ತು 3 ರವರನ್ನು ಬರಮಾಡಿಕೊಂಡು ಆರೋಪಿಯ ಮನೆಗೆ ಹೋಗಿ, ಆರೋಪಿಯ ಮನೆಯನ್ನು ಶೋಧನೆ ಮಾಡಿರುತ್ತೇನೆ. ಆರೋಪಿಯ ಮನೆಯಲ್ಲಿ ದೊರೆತ ಸಿ ಆರ್ ಸಿ ಹಾಗೂ ಒಂದು ಪಂಚಾಯಿತಿ ದೃಡೀಕರಣ ಪತ್ರವನ್ನು

ದಿಃ29-10-2009 ರಂದು ಮಹಜರ್ ಮುಖಾಂತರ ಬೆಳಿಗ್ಗೆ 6.30 ರಿಂದ 8.00 ಗಂಟೆಯವರೆಗೆ ವಶಕ್ಕೆ ಪಡೆದುಕೊಂಡಿರುತ್ತೇವೆ. ನಂತರ ಆ ದಾಖಲಾತಿಗಳಿಗೆ ಕ್ಯೂ ಡಿ -1 ಮತ್ತು ಕ್ಯೂಡಿ- 2 ಎಂದು ಕ್ರಮ ಸಂಖ್ಯೆಯನ್ನು ನೀಡಿರುತ್ತೇವೆ.

2. ನಂತರ ದಿಃ18-11-2009 ರಂದು ದಿಃ29-10-2009 ರಂದು ವಶಪಡಿಸಿಕೊಂಡು ದಾಖಲಾತಿಗಳ ನೈಜತೆಯನ್ನು ಪರಿಶೀಲಿಸಿ ವರದಿಯನ್ನು ನೀಡುವ ಬಗ್ಗೆ ಕಾರ್ಯದರ್ಶಿ, ಗ್ರಾಮ ಪಂಚಾಯಿತಿ ಕಾರ್ಯಲಯ, ಕೆದಮುಳ್ಳೂರು ರವರಿಗೆ ಠಾಣಾ ಕೋರಿಕೆ ಪತ್ರವನ್ನು ನೀಡಿರುತ್ತೇನೆ. ನಂತರ ದಿಃ04-02-2010 ರಂದು ಕೆದಮುಳ್ಳೂರು ಗ್ರಾಮ ಪಂಚಾಯಿತಿ ಕಚೇರಿಯಿಂದ ಒಂದು ವರದಿಯನ್ನು ಪಿ ಸಿ 443 ರವರ ಮುಖಾಂತರ ಹಾಜರುಪಡಿಸಿದ್ದು, ಆ ವರದಿಯಲ್ಲಿ ಸಹಿ ಮತ್ತು ಸೀಲು ತಾಳೆಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ನಂತರ ನಾನು ವರದಿಯನ್ನು ಹೊಂದಿಕೊಂಡು ಆರೋಪಿಯ ವಿರುದ್ದ ಒಂದು ಸ್ವವರದಿಯನ್ನು ಸಮಯ ಬೆಳಿಗ್ಗೆ 9.30 ರಿಂದ 10.30 ಗಂಟೆಯವರೆಗೆ ತಯಾರಿಸಿ ಠಾಣಾ ಮೊಕದ್ದಮೆ ಸಂಃ37/2010 ರಂತೆ ಆರೋಪಿಯ ವಿರುದ್ದ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಯ ಪತ್ತೆಗಾಗಿ ನೇಮಿಸಿದ ಪಿಸಿ 443 ಮತ್ತು ಪಿಸಿ 431 ಸುರೇಶ್ ರವರು ವಿರಾಜಪೇಟೆಯ ಖಾಸಗಿ ಬಸ್ ನಿಲ್ದಾಣದಲ್ಲಿ ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ.

3. ನಂತರ ಆರೋಪಿಯನ್ನು ಕೂಲಂಕಷವಾಗಿ ವಿಚಾರಣೆ ಮಾಡಿ, ಸ್ವಇಚ್ಛಾ ಹೇಳಿಕೆಯನ್ನು ಪಡೆದು ದಸ್ತಗಿರಿ ಕ್ರಮ ಜರುಗಿಸಲಾಯಿತು. ನಂತರ ಠಾಣೆಗೆ ಆರೋಪಿಯ ಕೈಬರಹದ ಮಾದರಿಗಳನ್ನು ಪಡೆಯುವ ಸಂದರ್ಭದಲ್ಲಿ ಪಂಚರಾದ ಚಾಸಾಃ4 ಮತ್ತು 5 ರವರನ್ನು ಬರಮಾಡಿಕೊಂಡು ಆರೋಪಿಯ ಇಂಗ್ಲಿಷ್ ಕೈಬರಹ ಆರು ಪುಟಗಳಲ್ಲಿ, ಇಂಗ್ಲಿಷ್ ಸಹಿ ಆರು ಪುಟಗಳಲ್ಲಿ, ಕನ್ನಡ ಕೈ ಬರಹ ಆರು ಪುಟಗಳಲ್ಲಿ ಮತ್ತು ಕನ್ನಡ ಸಹಿ ಆರು ಪುಟಗಳಲ್ಲಿ ಪಡೆಯಲಾಯಿತು. ನಂತರ ಈ ಮಾದರಿ ಹಾಳೆಗಳನ್ನು ಠಾಣಾ ಸ್ವತ್ತುಪಟ್ಟಿಯಲ್ಲಿ ದಾಖಲು ಮಾಡಿಕೊಂಡಿರುತ್ತೇನೆ. ಈ ಮಹಜರನ್ನು ಮದ್ಯಾಹ್ನ 3.00 ರಿಂದ 6.00 ಗಂಟೆಯವರೆಗೆ ಜರುಗಿಸಲಾಯಿತು. ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

4. ದಿಃ09-02-2010 ರಂದು ಆರೋಪಿಯ ಸಂಪರ್ಕದಲ್ಲಿರುವ ಕರಡ ಗ್ರಾಮ, ಪಾಲಂಗಾಲ ಗ್ರಾಮ, ಕಡಂಗ ಗ್ರಾಮಗಳಲ್ಲಿ ಇರುವ ಬ್ಯಾಂಕುಗಳಿಗೆ ಸಾಲ ಪಡೆದವರ ಪಟ್ಟಿಯನ್ನು ನೀಡಲು ಮನವಿಯನ್ನು ಸಲ್ಲಿಸಲಾಯಿತು. ನಂತರ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾಃ22 ರವರಿಗೆ ನೀಡಲಾಯಿತು.

**ಈ ಹಂತದಲ್ಲಿ ಸರಕಾರಿ ಸಹಾಯಕ ಅಭಿಯೋಜಕರು ದಾಖಲೆಯನ್ನು ನಿಶಾನೆಯಾಗಿ ಗುರುತಿಸಲು ಸಮಯಾವಕಾಶ ಕೋರಿದ್ದು, ನೀಡಲಾಯಿತು.**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಹಿ/-

**ಪ್ರದೀಪ ಪೋತದಾರ**
**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ**